# ಇಂದಿರಾ ಮನೆ ಆ್ಯಪ್ ಡೆಮೋ




- ಪ್ರತಿ ಬಾರಿ ಫಲಾನುಭವಿಯ ಪಿ.ಡಿ.ಒ ನ ಸಹಾಯದಿಂದ ಮಾತ್ರ ಜಿ.ಪಿ.ಎಸ್ ಮಾಡಲು ಸಾಧ್ಯವಾಗುತ್ತಿತ್ತು. ಈ ಸಮಸ್ಯೆಯನ್ನು ನಿವಾರಿಸಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಹೊಸದಾಗಿ ಇಂದಿರಾ ಮನೆ ಎನ್ನುವ ಮೋಬೈಲ್ ಆ್ಯಪ್ ಅನ್ನು ಬಿಡುಗಡೆ ಮಾಡಿದೆ.

- ಗೂಗಲ್ ಪ್ಲೆ ಸ್ಟೋರ್ ನಿಂದ ಇಂದಿರಾ ಮನೆ ಆ್ಯಪ್ ಅನ್ನು ಉಚಿತವಾಗಿ ಡೌನ್ ಲೋಡ್ ಮಾಡಿ ಇನ್ಸಟಾಲ್ ಮಾಡಬಹುದು.

- ಮೊದಲನೇ ಸ್ಕ್ರೀನ್ನಲ್ಲಿ ನಿಮಗೆ ಗ್ರಾಮೀಣ ಮತ್ತು ನಗರ ಎಂದು ಎರಡು ಆಯ್ಕೆ ಕಂಡು ಬರುತ್ತದೆ.
- ಗ್ರಾಮೀಣ ಭಾಗದ ಫಲಾನುಭವಿಗಳು ಗ್ರಾಮೀಣ ಎಂದು ಆಯ್ಕೆ ಮಾಡಬೇಕು. ನಗರ ಭಾಗದ ಫಲಾನುಭವಿಗಳು ನಗರ ಎಂದು ಆಯ್ಕೆ ಮಾಡಬೇಕು.




- ಗ್ರಾಮೀಣ ಅಥವಾ ನಗರ ಎಂದು ಆಯ್ಕೆ ಮಾಡಿದ ಮೇಲೆ ಎರಡು ಆಯ್ಕೆಗಳು ಕಂಡು ಬರುತ್ತವೆ.

1. ಖಾಲಿ ಜಾಗದ ಪರಿವೀಕ್ಷಣೆ
2. ಸ್ವಪಾವತಿ

ಖಾಲಿ ನಿವೇಶನದ ಜಿ.ಪಿ.ಎಸ್ ಮಾಡಬೇಕಾದಲ್ಲಿ ಪರಿವೀಕ್ಷಣೆ ಎಂದು ಆಯ್ಕೆ ಮಾಡಿ.




ಪರಿವೀಕ್ಷಣೆ ಎಂದು ಆಯ್ಕೆ ಮಾಡಿದ ಮೇಲೆ ನೀವು ನಿಮ್ಮ ಜಿಲ್ಲೆ ತಾಲ್ಲೂಕು, ಜಿಲ್ಲಾ ಪಂಚಾಯತಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಹಾಗೂ ಡೌನ್ಲೋಡ್ ಡೇಟಾ ಎಂದು ಒತ್ತಬೇಕು.




- ಮುಂದೆ ಫಲಾನುಭವಿಯನ್ನು ಆಯ್ಕೆ ಮಾಡಬೇಕು ಅಥವಾ ಫಲಾನುಭವಿಯ ಕೊಡ್ ಸಂಖ್ಯೆ ಅನ್ನು ನಮೂದಿಸಬೇಕು.

- ಇಲ್ಲಿ ನಿವೇಶನದ ವಸ್ತು ಸ್ಥಿತಿಯನ್ನು ಆಯ್ಕೆ ಮಾಡಬೇಕು. ಹಾಗೂ ಮೋಬೈಲ್ ನಂಬರನ್ನು ನಮೂದಿಸಬೇಕು. ಮೋಬೈಲ್ ನಂಬರ ನಮೂದಿಸುವುದು ಕಡ್ಡಾಯವಲ್ಲ.

ಹತ್ತು ಸಂಖ್ಯೆಯುಳ್ಳ ಛಾಲ್ತಿಯಲ್ಲಿರುವ ಫಲಾನುಭವಿ/ಫಲಾನುಭವಿ ಕುಟುಂಬದವರ ಮೋಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು.

- ಮುಂದುವರೆಸಿ ಎಂದು ಒತ್ತಿರಿ.




- ಇಲ್ಲಿ ಆಧಾರ್ ಕಾರ್ಡ್ ಕಡ್ಡಾಯ.

- ಆಧಾರ ಕಾರ್ಡ್ ನಲ್ಲಿನ ಕ್ಯೂ–ಆರ್ ಕೋಡ್ ನ್ನು ಸ್ಕ್ಯಾನ್ ಮಾಡಬೇಕು. ಸ್ಕ್ಯಾನ್ ಮಾಡಿರುವುದು ಸರಿ ಇದ್ದಲ್ಲಿ ಆಧಾರ್ ಕಾರ್ಡ್ ನ ಮಾಹಿತಿಯು ಸ್ಕ್ರೀನ್ ಮೇಲೆ ಕಂಡು ಬರುತ್ತದೆ. ಜೊತೆಗೆ ಆಧಾರ್ ಕಾರ್ಡ್ ಫೋಟೋವನ್ನು ಕಡ್ಡಾಯವಾಗಿ ಸೆರೆ ಹಿಡಿಯಬೇಕು.

•ಬ್ಯಾಂಕ್ ಮಾಹಿತಿ ಬ್ಯಾಂಕ್ ಪಾಸ್ ಬುಕ್ ಮಾಹಿತಿ ಇದ್ದಲ್ಲಿ ಅಳವಡಿಸಿ (ಕಡ್ಡಾಯವಲ್ಲ)
•ಖಾಲಿ ನಿವೇಶನ ಅಥವಾ ಹಾಲಿ ಕಚ್ಚಾಮನೆ ಎರಡರಲ್ಲಿ ಒಂದು ಕಡ್ಡಾಯ.




1. ಖಾಲಿ ನಿವೇಶನ ಅಥವಾ ಹಾಲಿ ವಾಸಿಸುತ್ತಿರುವ ಮನೆಯ ಫೋಟೋ ಸೆರೆಹಿಡಿಯುವುದು ಕಡ್ಡಾಯ. ಆದರೆ ಎರಡರಲ್ಲಿ ಒಂದು ಸೆರೆ ಹಿಡಿದು ಓಕೆ ಹಾಗೂ ಉಳಿಸಿ ಎಂದು ಒತ್ತಿ. ಒಂದು ವೇಳೆ ಉಳಿಸು ಎಂದು ಒತ್ತದಿದ್ದಲ್ಲಿ ಫೋಟೋ ಸೆವ್ ಆಗಿರುವುದಿಲ್ಲ.
2. ತದನಂತರ ಸೆರೆ ಹಿಡಿಯಲು ಬಾಕಿ ಇರುವ ಛಾಯಾಚಿತ್ರಗಳನ್ನು ಒತ್ತಿ.
3. ನೀವು ಮೊದಲು ಖಾಲಿ ನಿವೇಶನದ ಫೋಟೋ ತೆಗೆದಿದ್ದರೆ ಇಲ್ಲಿ ಹಾಲಿ ವಾಸಿಸುತ್ತಿರುವ ಮನೆಯ ಫೊಟೋವನ್ನು ಸೆರೆ ಹಿಡಿಯಬೇಕು.
4. ಹಾಲಿ ವಾಸಿಸುತ್ತಿರುವ ಮನೆಯ ಫೊಟೋ ತೆಗೆದಿದ್ದರೆ ಖಾಲಿ ನಿವೇಶನ ಫೋಟೋ ಸೆರೆ ಹಿಡಿಯಬೇಕು. ಒಂದು ವೇಳೆ ಸೆರೆ ಹಿಡಿಯದಿದ್ದಲ್ಲಿ ಆ ಫಲಾನುಭವಿಯ ಹೆಸರು ಸ್ಕ್ರೀನ್ ಮೇಲೆ ಗೋಚರಿಸುವುದಿಲ್ಲ.

ಹಿಂದಿನ ಮೆನುವಿಗೆ ತೆರಳಿ




ಸೆರೆ ಹಿಡಿಯಲಾಗಿರುವ ಛಾಯಾಚಿತ್ರಗಳನ್ನು ಅಪ್ ಲೋಡ್ ಮಾಡಲು ಅಪ್ ಲೋಡ್ ನ್ನು ಬಟನ್ ನ್ನು ಒತ್ತಿದ ತರುವಾಯ ಈ ಕೆಳಗಿನ ಸ್ಥಿತಿಗತಿಯನ್ನು ಅರಿಯಬಹುದು.

1. ಒಟ್ಟು ಸೆರೆಹಿಡಿದ ಛಾಯಾಚಿತ್ರಗಳು.
2. ಒಟ್ಟು ಅಪ್ಲೋಡ್ ಆದ ಛಾಯಾಚಿತ್ರಗಳು.
3. ಅಪ್ ಲೋಡ್ ಆಗಲು ಬಾಕಿ ಇರುವ ಛಾಯಾಚಿತ್ರಗಳು ಇರುತ್ತದೆ.

ಫಲಾನುಭವಿಯ ಹಂತವಾರು ಛಾಯಾಚಿತ್ರವನ್ನು ಅಪ್ ಲೋಡ್ ಮಾಡಲು ಸ್ವ ಪಾವತಿ ಎಂದು ಒತ್ತಿರಿ.




ಸ್ವ ಪಾವತಿ ಎಂದು ಒತ್ತಿದ ನಂತರ ನಿಮ್ಮ ಜಿಲ್ಲೆ ತಾಲ್ಲೂಕು, ಹಾಗೂ ಜಿ.ಪಿ ಯನ್ನು ಆಯ್ಕೆ ಮಾಡಿರಿ.




- ಫಲಾನುಭವಿಯನ್ನು ಆಯ್ಕೆ ಮಾಡಿ ಅಥವಾ ಫಲಾನುಭವಿಯ ಕೋಡ್ ನ್ನು ನಮೂದಿಸಿ.

. ಹಂತವನ್ನು ಆಯ್ಕೆ ಮಾಡಿ ಮುಂದುವರೆಸಿ ಎಂದು ಒತ್ತಿ.

ಹತ್ತು ಸಂಖ್ಯೆಯುಳ್ಳ ಛಾಲ್ತಿಯಲ್ಲಿರುವ ಫಲಾನುಭವಿ/ಫಲಾನುಭವಿ ಕುಟುಂಬದವರ ಮೋಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು.




• ಆಧಾರ ಕಾರ್ಡ್ ನಲ್ಲಿನ ಕ್ಯೂ-ಆರ್ ಕೋಡ್ ನ್ನು ಸ್ಕ್ಯಾನ್ ಮಾಡಬೇಕು. ಸ್ಕ್ಯಾನ್ ಮಾಡಿರುವುದು ಸರಿ ಇದ್ದಲ್ಲಿ ಆಧಾರ್ ಕಾರ್ಡ್ ನ ಮಾಹಿತಿಯು ಸ್ಕ್ರೀನ್ ಮೇಲೆ ಕಂಡು ಬರುತ್ತದೆ. ಜೊತೆಗೆ ಆಧಾರ್ ಕಾರ್ಡ್ ಫೋಟೋವನ್ನು ಕಡ್ಡಾಯವಾಗಿ ಸೆರೆ ಹಿಡಿಯಬೇಕು.

• ಪಿಡಿಒ ಲಾಗಿನ್ ನಲ್ಲಿ ಈಗಾಗಲೇ ಆಧಾರ್ ಸಂಖ್ಯೆ ನಮೂದಿಸಿದ್ದಲ್ಲಿ ಅಥವಾ ಈ ಹಿಂದಿನ ಪ್ರಗತಿ ನಮೂದಿಸುವಾಗ ಆಧಾರ್ ಸಂಖ್ಯೆ ನೀಡಿದ್ದಲ್ಲಿ ಪುನ: ಮಾಹಿತಿಯು ಬರುವುದಿಲ್ಲ.

•ಮನೆಯ ಹಂತವನ್ನು ಸೆರೆ ಹಿಡಿಯಿರಿ ಉಳಿಸು ಎಂದು ಒತ್ತಿರಿ.




1. ಅಪ್ಲೋಡ್ ಒತ್ತಿರಿ.
2. ತದನಂತರ ತಾವು ಸೆರೆಹಿಡಿದ ಛಾಯಾಚಿತ್ರಗಳ ಮಾಹಿತಿಯು ಈ ಮೇಲಿನಂತೆ ಗೋಚರಿಸುವುದರಿಂದ ತಮ್ಮ ಛಾಯಾಚಿತ್ರ ಅಪ್ಲೋಡ್ ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳಿರಿ.

# Thanking You